ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯ ವ್ಯವಸ್ಥೆಯನ್ನು ಸರ್ಕಾರದ ಆದೇಶದಂತೆ ಕೈಗೊಳ್ಳಲಾಯಿತು. ಆದರೆ ಕೆ.ಇ.ಬಿ.ಯು, ಎನ್.ಟಿ.ಪಿ.ಸಿ. ಎಫ್.ಸಿ.ಎಲ್. ಮುಂತಾದವುಗಳಿಗೆ ವಿದ್ಯುತ್ ಖರೀದಿ ಬಗ್ಗೆ ಕೋಟ್ಯಾಂತರ ರೂ.ಗಳ ಬಾಕಿ ಕೊಡಬೇಕಾಗಿದುದ್ದರಿಂದ ಆಗಸ್ಟ್ 96ರಿಂದ ಒಂದು ಅಶ್ವ ಶಕ್ತಿಗೆ ರೂ. 100 ರಂತೆ ನಾಮಿನಲ್ ದರವನ್ನು ನಿಗಧಿಪಡಿಸಬೇಕಾದಂತ ಪರಿಸ್ಥಿತಿಯು ಉಂಟಾಯಿತು ಹಾಗೂ ಈ ದರವನ್ನು ಜುಲೈ 97 ರಿಂದ ಒಂದು ಅಶ್ವ ಶಕ್ತಿಗೆ ರೂ. 300.00 ರಂತೆ ನಿಗಧಿಪಡಿಸಲಾಯಿತು. ಜುಲೈ 98 ರಿಂದ ವಿದ್ಯುತ್ ದರಗಳನ್ನು ಪರಿಷ್ಕರಿಸಿದಾಗ, ನೀರಾವರಿ ಪಂಪು ಸೆಟ್ಟುಗಳ ಬಳಕೆದಾರರಿಗೆ ವಿದ್ಯುತ್ ದರಗಳನ್ನು ಹೆಚ್ಚಿಸದೇ, ಪ್ರತಿ ಅಶ್ವಶಕ್ತಿಗೆ ರೂ. 300.00 ರ ವಿದ್ಯುತ್ ದರವನ್ನು ಮುಂದುವರಿಸಲಾಗಿದೆ. 30.6.96 ರವರೆಗೆ ರೈತರು ಕೊಡಬೇಕಾಗಿದ್ದ ಬಾಕಿ ಹಣದ ಮೇಲಿನ ಬಡ್ಡಿಯನ್ನು ಮನ್ನಾಮಾಡಲಾಯಿತು. ಆದರೆ ಹಣಕಟ್ಟದೇ ಇರುವ ರೈತರ ಜಮೀನಿನಿಂದ ಪಂಪು ಸೆಟ್ಟುಗಳನ್ನು ಕಿತ್ತುಕೊಂಡು ಹೋಗುವ ವ್ಯವಸ್ಥೆಯನ್ನು ಜಾರಿಗೊಳಿಸಿಲ್ಲ.

ಮಂಡಳಿಯ ಆದಾಯವನ್ನು ಉತ್ತಮಗೊಳಿಸುವ ಉದ್ದೇಶದಿಂದ ಹಣ ಬಾಕಿ ಉಳಿಸಿಕೊಂಡಿರುವ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯ ನಿಲುಗಡೆಯನ್ನು ಜಾರಿಗೊಳಿಸಲಾಗುತ್ತಿದೆ. ಮಂಡಳಿಯ ಹಣಕಾಸು ಪರಿಸ್ಥಿತಿಯು ಹದಗೆಟ್ಟಿರುವುದರಿಂದ ರೈತರ ಸಹಕಾರ ಅಗತ್ಯವಾಗಿದೆ.

ನೈವೇಲಿ ಲಿಗ್ನೈಟ್ ಕಾರ್ಪೊರೇಶನ್‌ಗೆ ಪಾವತಿ ಮಾಡಬೇಕಾದ ಶುಲ್ಕ.

958(1364) ಶ್ರೀಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಬೀದರ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ ಕೇಂದ್ರ ಸರ್ಕಾರ ಸ್ವಾಮ್ಯದ ಕೈಗಾರಿಕೆಗಳಿಂದ ಮಂಡಳಿ ನಿಗಮಗಳಿಂದ ಹಾಗೂ ಕೇಂದ್ರ ಸರ್ಕಾರ ಕಛೇರಿಗಳಿಂದ ಇಲ್ಲಿಯವರೆವಿಗೆ ಬರಬೇಕಾದ ಬಾಕಿ ಹಣದ ಮೊತ್ತವೆಷ್ಟು (ಪ್ರತಿಯೊಂದು ಸಂಸ್ಥೆಯಿಂದ ಬರಬೇಕಾದ ಬಾಕಿಯನ್ನು ವಿವರವಾಗಿ ತಿಳಿಸುವುದು)

ಆ) ಮೇಲ್ಕಂಡ ಹಣವು ಎಷ್ಟು ಅವಧಿಯಿಂದ ಬಾಕಿ ಉಳಿದಿದೆ ಇದರ ವಸೂಲಾತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಇದೇ ಸಮಯದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯು ನೈವೇಲಿ ಲಿಗ್ನೈಟ್ ಕಾರ್ಪೊರೇಷನ್‌ಗೆ ಕೊಡಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು; ಎಷ್ಟು ಅವಧಿಯಿಂದ ಈ ಬಾಕಿಯನ್ನು ಉಳಿಸಿಕೊಳ್ಳಲಾಗಿದೆ;

ಈ) ಈ ಬಾರಿ ಹಣವನ್ನು ಪಾವತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ರಾಜ್ಯ ವಿದ್ಯುತ್ ಮಂಡಳಿಗೆ ಹಣ ಬಾಕಿ ಉಳಿಸಿಕೊಂಡಿರುವುದಕ್ಕಾಗಿ ಕೇಂದ್ರ ಸರ್ಕಾರ ಸ್ವಾಮ್ಯದ ಉದ್ದಿಮೆಗಳು, ಮಂಡಳಿ, ನಿಗಮಗಳಿಗೆ ಬಾಕಿ ಹಣವನ್ನು ಕಟ್ಟುವರೆಗೆ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಲು ಸರ್ಕಾರ ಇದುವರೆವಿಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

ಋ) ಮೇಲ್ಕಂಡ ವಿಷಯದ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಂಡು ಅದರಿಂದ ಪಾವತಿಯಾಗುವ ಹಣವನ್ನು ಎನ್.ಎಲ್.ಸಿ. ಇವರಿಗೆ ಪಾವತಿ ಮಾಡುವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ದಿನಾಂಕ 1-12-98 ರ ಅಂತ್ಯದಲ್ಲಿದ್ದಂತೆ ಕ.ವಿ. ಮಂಡಳಿಗೆ ಕೆಳಕಂಡ ಕೇಂದ್ರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳಿಂದ ಸಂಸ್ಥೆಗಳಿಂದ ಬರಬೇಕಾದ ಬಾಕಿಯ ವಿವರ ಈ ರೀತಿ ಇದೆ.

			(ಕೋಟಿ ರೂ.ಗಳಲ್ಲಿ)
1.	ಕೆ.ಐ.ಓ.ಸಿ.ಎಲ್.	-	310-37
2.	ವಿ.ಐ.ಎಸ್.ಎಲ್.	-	145.90
3.	ಬಿ.ಜಿ.ಎಂ.ಎಲ್.	-	26.07
4.	ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್	-	2.55
5.	ಸಿಮೆಂಟ್ ಕಾರ್ಪೊರೇಷನ್ ಇಂಡಿಯಾ ಕುರ್ಕುಂಟಾ	-	2.46
		ಒಟ್ಟು ಮೊತ್ತ	487.00

ಇವುಗಳಲ್ಲದೆ ಕೆಳಕಂಡ ಸರ್ಕಾರಿ ಸ್ವಾಮ್ಯದ ಮಂಡಳಿಗಳಿಂದಲೂ ಹೆಚ್ಚಿನ ಪ್ರಮಾಣದ ಬಾಕಿ ಬರಬೇಕಾಗಿದೆ. (31-12-98 ರ ಅಂತ್ಯದಲ್ಲಿದ್ದಂತೆ)

		(ಕೋಟಿ ರೂ.)
ಬೆಂಗಳೂರು ಜಲಮಂಡಳಿ	-	128.60
ಕರ್ನಾಟಕ ಪಟ್ಟಣ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	-	188.89

ಅಲ್ಲದೇ ರಾಜ್ಯ ಸರ್ಕಾರದ ಸ್ವಾಮ್ಯ ಹೊಂದಿರುವ ಕೈಗಾರಿಕೆಗಳು, ಇಲಾಖೆಗಳು ಮತ್ತ ಏರಾವರಿ ಯೋಜನೆಗಳು ಇತ್ಯಾದಿಗಳಿಂದ 31-12-98 ರ ಅಂತ್ಯದಲ್ಲಿದ್ದಂತೆ ಒಟ್ಟು 25.87 ಕೋಟಿ ರೂ.ಗಳ ಬಾಕಿ ಬರಬೇಕಾಗಿದೆ.

೫) ಕೇಂದ್ರ ಸರ್ಕಾರ ಸ್ವಾಮ್ಯದ ಕೈಗಾರಿಕೆ ಸಂಸ್ಥೆಗಳಿಂದ ಬರಬೇಕಾದ ಬಾಕಿಯ ಅವಧಿ ಈ ರೀತಿ ಇದೆ.

1.	ಕೆ.ಐ.ಓ.ಸಿ.ಎಲ್.	-	ಅಕ್ಟೋಬರ್ 85 ರಿಂದ ಬಾಕಿಯಿದೆ
2.	ವಿ.ಐ.ಎಸ್.ಎಲ್.	-	ಮಾರ್ಚ್ 94 --"--
3.	ಟಿ.ಬಿ.ಎಂ.ಎಲ್.	-	ಅಕ್ಟೋಬರ್ 85 --"--
4	ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್	-	ಜೂನ್ 93 --"--
5.	ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ		1993 --"--

ಅಲ್ಲದೆ ರಾಜ್ಯ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು, ಇಲಾಖೆಗಳು, ಏತ ನೀರಾವರಿ ಯೋಜನೆಗಳು ಹಾಗೂ ಇತರ ಮಂಡಳಿಗಳಿಂದ ಬರಬೇಕಾದ ಬಾಕಿಯು ಸುಮಾರು ಎರಡು ವರ್ಷಗಳಿಗಿಂತ ಹಿಂದಿನಿಂದಲೂ ಬಾಕಿ ಇರುತ್ತದೆ.

ಬಾಕಿ ವಸೂಲಾತಿಗಾಗಿ ಮಂಡಳಿಯಲ್ಲಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಗ್ರಾಹಕರು ಮಂಡಳಿಗೆ ಕೊಡಬೇಕಾದ ಬಾಕಿ ಮೊತ್ತವನ್ನು ಪಾವತಿಸಲು ಒತ್ತಾಯಿಸುತ್ತಾ, ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿದೆ.

2) ಮಂಡಳಿಯು ಬಾಕಿ ವಸೂಲಾತಿಗಾಗಿ ವಿಶೇಷ ಪಡೆಗಳನ್ನು ರಚಿಸಿ, ಬಾಕಿದಾರರು ವಿದ್ಯುತ್ ಸ್ಥಗಿತಗೊಳಿಸುವಿಕೆ ಕಾರ್ಯಾಚರಣೆಯನ್ನು ಹಾಗೂ ಅದರ ಮೇಲುಸ್ತುವಾರಿಯನ್ನು ವ್ಯಾಪಕವಾಗಿ ನಡೆಸುವಂತೆ ಕ್ರಮ ಕೈಗೊಂಡಿದೆ. ಅದಾಗ್ಯೂ ಬಾಕಿ ಇದ್ದ ಸಂದರ್ಭದಲ್ಲಿ ಕೆ.ಇ.ಬಿ. ರಿಕವರಿ ಆಫ್ ಡ್ಯೂಸ್ ಆಕ್ಟ್ 1976ರ ಪ್ರಕಾರ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

3) ವಿಭಾಗ ವ್ಯಾಪ್ತಿಯಲ್ಲಿ ಕಂದಾಯ ವಸೂಲಾತಿ ಮೇಲ್ವಿಚಾರಣೆಗಾಗಿ ಒಬ್ಬ ಲೆಕ್ಕಾಧಿಕಾರಿಯನ್ನು ನೇಮಿಸಿ ವಸೂಲಾತಿಯನ್ನು ತೀವ್ರಗೊಳಿಸಲಾಗಿದೆ.

4) ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಂದ ಬರಬೇಕಾದ ಬಾಕಿ ಬಗ್ಗೆ ಸರ್ಕಾರದಲ್ಲಿನ ಸಂಬಂಧಪಟ್ಟ ಇಲಾಖೆಯೊಂದಿಗೆ ಉನ್ನತಮಟ್ಟದಲ್ಲಿ ವ್ಯವಹರಿಸುತ್ತಿದೆ.

೬) ಕ.ವಿ. ಮಂಡಳಿಯು ನ್ಯೂವೇಲಿ ಲಿಗ್ನೈಟ್ ಕಾರ್ಪೊರೇಷನ್ ಸಂಸ್ಥೆಯಿಂದ ಖರೀದಿಸಿದ ವಿದ್ಯುತ್‌ಗಾಗಿ ನೀಡಬೇಕಾದ ಬಾಕಿಯು 1999ರ ಫೆಬ್ರವರಿ ಅಂತ್ಯದಲ್ಲಿದ್ದಂತೆ ರೂ. 90 ಕೋಟಿ ಮಾತ್ರ. ಈ ಬಾಕಿಯು 1998-99 ರ ಅವಧಿಗೆ ಸಂಬಂಧಪಟ್ಟಿರುತ್ತದೆ.

ಆದರೆ ಮೆ: ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯು ಕ.ವಿ. ಮಂಡಳಿಯಿಂದ ಬರಬೇಕಾದ ಬಾಕಿಯ ಮೊತ್ತ ರೂ. 2 ಕೋಟಿ ಎಂದು ಉಳಿಸಿದ್ದು ಅದರ ವಿವರಗಳು ಕೆಳಕಂಡಂತಿವೆ.

1)	ಚಾಲ್ತಿ ತಿಂಗಳ ವಿದ್ಯುತ್ ಬಾಕಿ		ಇಲ್ಲ	
2)	ಮಂಡಳಿಯಿಂದ ಪಾವತಿಯಾಗಬೇಕಾಗಿರುವ ಹಿಂದಿನ ಬಾಕಿ	ರೂ.	90	ಕೋಟಿ
3)	ಹಿಂದಿನ ಬಾಕಿಗೆ ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯು ಕೇಳಿರುವ ಬಡ್ಡಿ	ರೂ.	123	ಕೋಟಿ
4)	ಏಪ್ರಿಲ್ 98 ರಿಂದ ಜಾರಿಗೆ ಬರುವಂತೆ ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯು ಈಗ ವಿದ್ಯುತ್ ಜಕಾತಿ ದರವನ್ನು ಹೆಚ್ಚಿಸಿದ್ದು, ಜಕಾತಿ ದರ ವ್ಯತ್ಯಾಸವನ್ನು ಕೇಳುತ್ತಿರುವುದನ್ನು ಮಂಡಳಿಯು ಇನ್ನೂ ಅನುಮೋದಿಸಬೇಕಾಗಿರುತ್ತದೆ.	ರೂ.	62	ಕೋಟಿ
5)	ನೈವೇಲಿ ಲಿಗ್ನೈಟ್ ಸಂಸ್ಥೆಯವರು ಕೇಳುತ್ತಿರುವ ಪ್ರಸರಣಾ ವೆಚ್ಚ	ರೂ.	1	ಕೋಟಿ
6)	ಫೆಬ್ರವರಿ ಮಾಹೆಯಲ್ಲಿ ಬಿಡುಗಡೆ ಮಾಡಿರುವ ಕೇಂದ್ರೀಯ ಮತ್ತು ಹೊಂದಾಣಿಕೆ ಹಣ ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯವರು ಇನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು.	ರೂ.	12	ಕೋಟಿ
	ಒಟ್ಟು ಮೊತ್ತ	ರೂ.	288	ಕೋಟಿ

ಈ) ಕ.ವಿ. ಮಂಡಳಿಯು ನೈವೇಲಿಗೆ ಲಿಗ್ನೈಟ್ ಕಾರ್ಪೋರೇಷನ್‌ಗೆ 1997-98 ಮತ್ತು 1998-99 ರಲ್ಲಿ ವಿದ್ಯುತ್ ಖರೀದಿ ಬಿಲ್ಲು ಮೊಬಲಗು 383 .89 ಕೋಟಿ ರೂ. ಪಾವತಿ ಮಾಡುವುದರ ಜೊತೆಗೆ 121.17ಕೋಟಿ ರೂ. ಕೇಂದ್ರೀಯ ಹೊಂದಾಣಿಕೆ ಸೇರಿ ಹಳೇ ಬಾಕಿಗೆ ಪಾವತಿ ಮಾಡಿರುತ್ತದೆ. ಇಲ್ಲದೆ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ಮಂಡಳಿಗೆ ಬರಬೇಕಾದ ಬಾಕಿಯನ್ನು ಪಾವತಿ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದು ನೈವೇಲಿ ಲಿಗ್ನೈಟ್ ಸಂಸ್ಥೆಯು ಮಂಡಳಿಗೆ ವಿದ್ಯುತ್ ನಿಲುಗಡೆ ಮಾಡದೇ ವಿದ್ಯುತ್ ಸರಬರಾಜು ಮಾಡುವಂತೆ ಕೋರಲಾಗಿದೆ.

ಹಾಗೂ ಕರ್ನಾಟಕ ಸರ್ಕಾರ ನೈವೇಲಿ ಲಿಗ್ನೈಟ್ ಸಂಸ್ಥೆಗೆ ನೀಡಬೇಕಾದ ಬಾಕಿಯನ್ನು ಆದಷ್ಟು ಬೇಗ ತೀರಿಸಲು ಕಾರ್ಯ ತಂತ್ರವನ್ನು ರೂಪಿಸುತ್ತಿದೆ.

ಊ) ಕೇಂದ್ರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳು ನಿಗಮ ಮಂಡಳಿಗಳು ಕ.ವಿ. ಮಂಡಳಿಗೆ ಪಾವತಿ ಮಾಡಬೇಕಾದ ಬಾಕಿಯ ವಸೂಲಾತಿ ಬಗ್ಗೆ ಅವುಗಳ ನೌಕರರ ಕಲ್ಯಾಣವನ್ನು ಗಮನಿಸಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತಹ ಉಗ್ರ ಕ್ರಮವನ್ನು ಕೈಗೆತ್ತಿಕೊಳ್ಳುವುದು ಕಷ್ಟಕರವಾಗಿದೆ.

ಋ) ಈ ವಿಷಯದ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸರ್ಕಾರದಲ್ಲಿನ ಸಂಬಂಧಪಟ್ಟ ಇಲಾಖೆಗಳೊಂದಿಗೆ ಉನ್ನತ ಮಟ್ಟದಲ್ಲಿ ವ್ಯವಹರಿಸುತ್ತಿದೆ. ಅಲ್ಲದೇ ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆ : ಕೈಗಾರಿಕೆಗಳಿಂದ ಬರಬೇಕಾದ ಬಾಕಿಯ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಾಕಿಯ ಪಾವತಿಗೆ ವ್ಯವಸ್ಥೆ ಮಾಡಲು ಒತ್ತಾಯಿಸಲಾಗುತ್ತಿದೆ. ಇದರ ಜೊತೆಗೆ ನೈವೇಲಿ ಲಿಗ್ನೈಟ್ ಸಂಸ್ಥೆಗೆ ನೀಡಬೇಕಾದ ಬಾಕಿಯನ್ನು ಆದಷ್ಟು ಬೇಗ ತೀರಿಸಲೂ ಸಹ ಕಾರ್ಯತಂತ್ರವನ್ನು ರೂಪಿಸುತ್ತಿದೆ.

ಹುಬ್ಬಳ್ಳಿ ನಗರದಲ್ಲಿ ನಡೆದ ಗೋಲಿಬಾರ್ ಘಟನೆ.

959(1082) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಮಹಾನಗರದಲ್ಲಿ 1994ರ ಆಗಸ್ಟ್ ತಿಂಗಳಲ್ಲಿ ನಡೆದ ಗೋಲಿಬಾರ್ ಘಟನೆಯ ಕುರಿತಂತೆ ಸರ್ಕಾರ ನೇಮಿಸಿದ ನ್ಯಾಯಮೂರ್ತಿ ಶ್ರೀ ರಾಜಶೇಖರಮೂರ್ತಿ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ;

ಆ) ಹಾಗಿದ್ದಲ್ಲಿ ವರದಿಯ ಮುಖ್ಯಾಂಶಗಳೇನು, ವರದಿಯನ್ನು ಸದನಕ್ಕೆ ಎಂದು ಸಲ್ಲಿಸಲಾಗುವುದು;

ಇ) ವರದಿಯ ಆಧಾರದ ಮೇಲೆ ಯಾರಾದರೂ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :—

ಅ) ಹೌದು

ಆ) ಇ) ವರದಿಯು 2 ಸಂಪುಟಗಳಲ್ಲಿ ಇದ್ದು 800 ಪುಟಗಳನ್ನು ಒಳಗೊಂಡಿದ್ದು, ವರದಿಯನ್ನು ಪರಿಶೀಲಿಸುತ್ತಿದ್ದು ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಪರಿಶೀಲಿಸಿದ ನಂತರ ಸೂಕ್ತ ತೀರ್ಮಾನ ಕೈಗೊಂಡು ನಂತರ ಸದನದಲ್ಲಿ ಮಂಡಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.